ಕೊಡುವುದಕ್ಕೆ ತೊಂದರೆ ಇರುತ್ತಿರಲಿಲ್ಲ. ಆದ್ದರಿಂದ ತಾವು ದಯವಿಟ್ಟು ಹೆಚ್ಚಿಗೆ ಹಣ ಕೊಡಬೇಕು. ಜಲಮಂಡಳಿಗೆ ಹಣ ಕೊಡಬೇಕು. ಜಲಮಂಡಳಿಗೆ ಹಣಕೊಟ್ಟರೆ, ಅವರು ಮುಂದಿನ ಕೆಲಸ ಮಾಡುವುದಕ್ಕೆ ಅನುಕೂಲ ಆಗುತ್ತದೆ. ಹಣವನ್ನು ಸರ್ಕಾರ ಸರಿಯಾಗಿ ಬಿಡುಗಡೆ ಮಾಡುವುದು ಒಂದು, ಮತ್ತೆ ಒಂದನೇ ತಾರೀಖಿನಿಂದ ನೀರು ಬಂದಾಗದಂತೆ ಸರ್ಕಾರ ಎಚ್ಚರಿಕೆ ವಹಿಸಬೇಕು. ಬೆಂಗಳೂರು ಬಿಟ್ಟರೆ ಇದು ಎರಡನೇ ಮಹಾನಗರ. ಆದ್ದರಿಂದ ಇದಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, ಇದು ನಮ್ಮ ಕರ್ನಾಟಕ ವಾಟರ್ ಸಪ್ಲೈ ಅಂಡ್ ಡ್ರೈನೇಜ್ ಬೋರ್ಡ್‌ನಿಂದ ಸೂಪರಿಂಟೆಂಡೆಂಟ್ ಇಂಜಿನಿಯರ್ ಒಂದು ಲೆಟರ್ ಕಳಿಸಿದ್ದಾರೆ. ಬಲ್ಕ್ ವಾಟರ್ ಸಪ್ಲೈಗೆ ತಾವು ಹಣ ತುಂಬಬೇಕು, ಕಳೆದ ಮೂರು-ನಾಲ್ಕು ವರ್ಷಗಳಿಂದ ತುಂಬಿಲ್ಲ, ಅದಕ್ಕೋಸ್ಕರ ತಾವು ಹಣ ತುಂಬದಿದ್ದುದಕ್ಕೆ ನಮಗೆ ಮೇಂಟೇನ್ ಮಾಡುವುದಕ್ಕೆ ಕಷ್ಟವಾಗುತ್ತದೆ ಎಂದು ಹೇಳಿರತಕ್ಕಂಥ ಪತ್ರ ಅದು. ಅದು ಹುಬ್ಬಳ್ಳಿ ನಗರ ಕಾರ್ಪೋರೇಷನ್‌ಗೆ ಹೋಗಿರತಕ್ಕಂಥಾದ್ದು. ಇದರಲ್ಲಿ ನೀರು ನಿಲ್ಲಿಸುತ್ತೇವೆ ಎಂದು ಹೇಳಿಲ್ಲ. ನೀರು ನಿಲ್ಲಿಸಿಬಿಡುತ್ತೇವೆ ಎಂದು ಅವರು ಹೇಳಿಲ್ಲ. ಹಾಗೆ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ನಿಲ್ಲಿಸದೇ ಇರುವ ಹಾಗೆ ನಾವು ನೋಡಿಕೊಳ್ಳುತ್ತೇವೆ. ಒಬ್ಬ ಅಧಿಕಾರಿ ಪತ್ರ ಕಳಿಸಿದ ತಕ್ಷಣಕ್ಕೆ ನೀರು ಸಾಧ್ಯವಿಲ್ಲ. ಮೂರು-ನಾಲ್ಕು ವರ್ಷಗಳಿಂದ ಹಣ ಕಟ್ಟಿಲ್ಲ ಎನ್ನುವ ಉದ್ದೇಶದಿಂದ, ಸುಮ್ಮನೆ ಹಣ ಕಟ್ಟಿ, ಇಲ್ಲದಿದ್ದರೆ ಕಷ್ಟವಾಗುತ್ತದೆ ನಮಗೆ ಮೇಂಟನೆನ್ಸ್‌ಗೆ ಕಷ್ಟವಾಗುತ್ತದೆ ಎಂದು ಅವರು ಹೇಳಿದ್ದಾರೆ. ಇದರ ಬಗ್ಗೆ ನೀರು ನಿಲ್ಲಿಸುವುದಿಲ್ಲ ಮಾನ್ಯ ಸದಸ್ಯರು ಕಳವಳ ಪಟ್ಟುಕೊಳ್ಳಬೇಕಾಗಿಲ್ಲ.

ಉಪಾಧ್ಯಕ್ಷರು :- ಕೊನೆಯ ಒಂದು ಪ್ರಶ್ನೆಯನ್ನು ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಪ್ರಸ್ತಾಪ ಮಾಡುತ್ತಾರೆ.

(ಎ) ಉಪ್ಪಾರಪೇಟೆ ಪೋಲೀಸ್ ಸ್ಟೇಷನ್ನಿನಲ್ಲಿ ಶ್ರೀಮಾನ್ ಸುಬ್ಬೋಜಿರಾವ್ ರವರನ್ನೂ ಎವಿಕ್ಷನ್ ಮಾಡತಕ್ಕಂಥ ವಿಚಾರ

+ **ಶ್ರೀಮತಿ ಪ್ರಮೀಳಾ ನೇಸರ್ಗಿ** :- ಮೊನ್ನೆತಾನೇ ನಮ್ಮ ಉಪನಾಯಕರು ಹೆಬ್ಬಾಳದಲ್ಲಿ ಕೋರ್ಟು ಎಕ್ಸಿಕ್ಯೂಷನ್‌ನಲ್ಲಿ ಮನೆಗಳನ್ನು ನಿರ್ನಾಮ ಮಾಡಿದ ವಿಷಯವನ್ನು ಹೇಳಿದ್ದರು. ಈಗ ಮತ್ತೆ ಅದೇ ರೀತಿ ಉಪ್ಪಾರಪೇಟೆ ಪೋಲೀಸ್ ಸ್ಟೇಷನ್‌ನಲ್ಲಿ ಶ್ರೀಮಾನ್ ಸುಬ್ಬೋಜಿರಾವ್ ಅವರನ್ನು ಎವಿಕ್ಷನ್ ಮಾಡತಕ್ಕಂಥ ಸಂದರ್ಭದಲ್ಲಿ ಪೋಲೀಸ್ ಭಾವಾ ಅವರು ಐದು ಲಕ್ಷ ರೂಪಾಯಿಗಳನ್ನು ಲೂಟಿ ಮಾಡಿ ಆ ಹಣವನ್ನು ತೆಗೆದುಕೊಂಡ ನಂತರ ಈ ಬಗ್ಗೆ ಕಂಪ್ಲೇಂಟ್ ಕೊಡುವುದಕ್ಕೆ ಹೋದರೆ, ಮಾನ್ಯ ಸುಬ್ಬಾಜಿರಾವ್ ಅವರಿಗೆ ಅವರ ಜಾತಿಯ ಹೆಸರು ಹಿಡಿದು ಅವರನ್ನು ಬಯ್ದು ಕಳಿಸಿದ್ದಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಿರಿಯೆಂದು ದಯವಿಟ್ಟು ಹೇಳಬೇಕು.

ಈ ರೀತಿ ಮಾಡುವುದು ತಪ್ಪು ಎಂದು ಅಲ್ಲಿದ್ದವರೆಲ್ಲ ಹೋಗಿ ಕಂಪ್ಲೇಂಟ್ ಕೊಡುವುದಕ್ಕೆ ಹೋದರೆ ಅದನ್ನು ತೆಗೆದುಕೊಂಡು 60 ಸಾವಿರ ರೂಪಾಯಿ ಸ್ಟ್ಯಾಂಪ್ ಪೇಪರ್ ಮತ್ತು ಐದು ಲಕ್ಷ ರೂಪಾಯಿ ಹಣವನ್ನು ದೋಚಿಕೊಂಡು ಹೋಗಿದ್ದಾರೆ. ಈ ರೀತಿ ಆದರೆ ಲಾ ಅಂಡ್ ಆರ್ಡರ್ ಯಾರು ಮೇನ್‌ಟೇನ್ ಮಾಡಬೇಕೋ, ಅವರೇ ಈ ರೀತಿ ಮಾಡುವುದಾದರೆ ಈ ದೇಶದಲ್ಲಿ ಪ್ರಜೆಗಳಿಗೆ ಹೇಗೆ ರಕ್ಷಣೆ ಸಿಗುತ್ತದೆಯೆಂದು ತಾವು ಯೋಚನೆ ಮಾಡಬೇಕು. ತಕ್ಷಣ ಭಾವಾ ಅವರು ಉಪ್ಪಾರಪೇಟೆ ಪೋಲೀಸ್ ಸ್ಟೇಷನ್‌ನಲ್ಲಿ ಏನು ಈ ಕೃತ್ಯವನ್ನು ಎಸಗಿದ್ದಾರೆ, ಅವರನ್ನು ಸಸ್ಪೆನ್ಶನ್‌ನಲ್ಲಿ ಇಡಬೇಕೆಂದು ಸದನದಲ್ಲಿ ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ವಿ. ಮಾರುತಿರಾವ್ ಪವಾರ್ :- ಉಪ್ಪಾರಪೇಟೆ ಪೋಲೀಸ್ ಸ್ಟೇಷನ್‌ನಲ್ಲಿ ಆಗಿರತಕ್ಕಂಥ ದೌರ್ಜನ್ಯ ಏನಿದೆ, ಆ ಅಧಿಕಾರಿ ಮೇಲೆ ತಕ್ಷಣ ಕ್ರಮ ತೆಗೆದು ಕೊಳ್ಳಬೇಕು. ಇಲ್ಲದಿದ್ದರೆ ತೊಂದರೆಯಾಗುತ್ತದೆ.

ಉಪಾಧ್ಯಕ್ಷರು :- ಎಲ್ಲರೂ ಮಾತನಾಡಿದರೆ ಹೇಗೆ? ಸಭೆ ನಡೆಸುವುದು ಬೇಡವೇನು? ಎಷ್ಟು ಜನ ಮಾತನಾಡುತ್ತೀರಿ?

ಶ್ರೀ ವಿ. ಮಾರುತಿರಾವ್ ಪವಾರ್ :- ಅವರಿಗೆ ಸ್ಟೇಷನ್‌ನಲ್ಲಿ ಗೌರವ ಸಿಗಲಿಲ್ಲ. ಗೌರವಾನ್ವಿತ ವ್ಯಕ್ತಿಗಳಿಗೆ ಈ ರೀತಿಯಾದರೆ ಅದನ್ನು ತಡೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅಂತಹ ಅಧಿಕಾರಿ ಮೇಲೆ ತತ್‌ಕ್ಷಣ ಕ್ರಮ ಜರಿಗುಸಬೇಕಾಗುತ್ತದೆ. ಏಕೆಂದರೆ ಗೌರವಾನ್ವಿತ ವ್ಯಕ್ತಿಗಳಿಗೇ ಹೀಗಾದರೆ, ಸಾಮಾನ್ಯ ಒಬ್ಬ ಮನುಷ್ಯ ಹೋದರೆ ಏನಾಗಬಹುದು? ಇದು ಬಹಳ ಪ್ರಮುಖವಾದ ವಿಚಾರ ಇದೆ. ಇದರ ಬಗ್ಗೆ ಕ್ರಮ ತೆಗೆದುಕೊಂಡು ತಕ್ಷಣ ಆ ಅಧಿಕಾರಿಯನ್ನು ವಿಚಾರಣೆಗೆ ಒಳಪಡಿಸಿ ಕ್ರಮವನ್ನು ಜರುಗಿಸಬೇಕೆಂದು ನಾನು ಹೇಳುತ್ತೇನೆ.

ಉಪಾಧ್ಯಕ್ಷರು :- ತಾವು ದಯಮಾಡಿ ಕುಳಿತುಕೊಳ್ಳಿ.

+ **ಶ್ರೀ ಆರ್. ರೋಷನ್ ಬೇಗ್** (ಗೃಹ ರಾಜ್ಯ ಸಚಿವರು) :- ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಶಾಸಕರಾದ ಮಾರುತಿಪವಾರ್‌ರವರು ಹಾಗೂ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಉಪ್ಪಾರಪೇಟೆ ಪೋಲೀಸ್ ಠಾಣೆ ಬಗ್ಗೆ ಹೇಳಿದ್ದಾರೆ. ದಿನಾಂಕ 23ನೇ ತಾರೀಖು ಬೆಳಿಗ್ಗೆ ಸುಮಾರು ಹತ್ತೂವರೆ ಗಂಟೆಗೆ ಬೆಂಗಳೂರು ಉಪ ವ್ಯಾಜ್ಯ ನ್ಯಾಯಾಲಯದ ಅಮೀನರು ಉಪ್ಪಾರಪೇಟೆ ಪೋಲೀಸ್ ಠಾಣೆಗೆ ಹಾಜರಾಗಿ, ನ್ಯಾಯಾಲಯದ ಸಹಾಯಕ ರಿಜಿಸ್ಟ್ರಾರ್‌ರವರು ದಿನಾಂಕ 15-7-96 ರಂದು ಬರೆದ ಪತ್ರವನ್ನು ಹಾಜರುಪಡಿಸಿದರು. ಸದರಿ ಪತ್ರದಲ್ಲಿ ಡಿಲಿವರಿ ವಾರಂಟ್ ನಂ. ಎಕ್ಸ್ 270496 ಹೆಚ್‌ಆರ್‌ಸಿ 2236 : 88 ನ್ಯಾಯಾಲಯದಿಂದ ಅಮೀನರು ಜಾರಿಗೊಳಿಸಿ ಮತ್ತೆ, ಈ ಪ್ರಕರಣ ಡಿಕ್ರಿ ಹೋಲ್ಡರ್ ಇವರ ಸ್ವಾಧೀನಕ್ಕೆ ನೀಡಲು ಪೋಲೀಸರು ಸೂಕ್ತ ಸಹಕಾರ ನೀಡುವಂತೆ ನಿರ್ದೇಶಿಸಲಾಗಿತ್ತು. ಅದನ್ನು ಪರಿಶೀಲಿಸಿ, ನಂತರ

ಸದರಿ ಡೆಲಿವರಿ ವಾರೆಂಟ್ ನಂ. 221, 1ನೇ ಮಹಡಿಯ ಪೂರ್ವಭಾಗ, ಸುಭೇದಾರ್ ಛತ್ರಂ ರಸ್ತೆ, ಬೆಂಗಳೂರು ಇದಕ್ಕೆ ಅನ್ವಯಿಸಿಕೊಂಡು ಬರುತ್ತದೆ. ಆಲ್ಲಿ ಏನಾಗಿದೆಯೆಂದರೆ ಕೋರ್ಟ್ ಆರ್ಡರ್ ಬರುತ್ತದೆ, ಅಮೀನರು ಬರುತ್ತಾರೆ, ವಾರೆಂಟ್ ತೆಗೆದುಕೊಂಡು ಬರುತ್ತಾನೆ, ಡಿಕ್ರಿಹೋಲ್ಡರ್ ಕೈಗೆ ಕೊಡುತ್ತಾನೆ. ನಮಗೆ ಸಹಾಯ ಮಾಡಿ ಎಂದು ಹೇಳುತ್ತಾನೆ. ಪೋಲೀಸರು ಅವರ ಜೊತೆಯಲ್ಲಿ ಹೋಗುತ್ತಾರೆ. ಆಲ್ಲಿ ಸ್ಥಳಕ್ಕೆ ಒಬ್ಬ ಅಸಿಸ್ಟೆಂಟ್ ಸಬ್ ಇನ್‌ಸ್ಪೆಕ್ಟರ್, ಇಬ್ಬರು ಹೆಡ್ ಕಾನ್‌ಸ್ಟೇಬಲ್ಸ್, ಒಬ್ಬ ಪೋಲೀಸ್ ಇನ್‌ಸ್ಪೆಕ್ಟರು ಹೋಗುತ್ತಾರೆ. ಇವರೇನು ಭಾವ ಎನ್ನತಕ್ಕಂಥ ಇನ್‌ಸ್ಪೆಕ್ಟರು ಹೇಳುತ್ತಿದ್ದಾರೆ, ಅವರು ಸ್ಪಾಟ್‌ಗೆ ಹೋಗುವುದೇ ಇಲ್ಲ. ಇವರು ಹೇಳುತ್ತಾ ಇರುವುದು (ಅ) ಸಾವಿರ ಸ್ಟಾಂಪ್ ಪೇಪರ್, 5 ಲಕ್ಷ ಕ್ಯಾಷ್ ಎತ್ತಿಕೊಂಡು ಹೋದರು ಎಂದು ಹೇಳುವುದು ನಿಜವಾದುದು ಆಲ್ಲ. ಆದು ಸತ್ಯಕ್ಕೆ ದೂರವಾದುದು. ಏಕೆಂದರೆ, ಭಾವ ಎನ್ನತಕ್ಕಂಥ ಇನ್‌ಸ್ಪೆಕ್ಟರು ಆ ಸ್ಪಾಟ್‌ಗೆ ಹೋಗಲೇ ಇಲ್ಲ. ದಿನಾಂಕ 23 ನೇ ತಾರೀಖು ರಾತ್ರಿ 8 ಗಂಟೆಗೆ ಹನುಮಂತನಗರದ ಗವಿಪುರಂ ಗುಟ್ಟಹಳ್ಳಿಯ ನಿವಾಸಿಯಾದ ಶ್ರೀ ಕೃಷ್ಣ ಮೂರ್ತಿಯವರು ಉಪ್ಪಾರಪೇಟೆ ಪೋಲೀಸ್ ಠಾಣೆಗೆ ಬಂದು, ದಿನಾಂಕ 23-7-96 ರಂದು ಸುಮಾರು ಹನ್ನೊಂದೂವರೆ ಗಂಟೆಗೆ ಸುಮಾರು 4-5 ಜನ ಬಂದು ಕಂಪ್ಲೇಂಟ್ ಮಾಡುತ್ತಾರೆ. ನಾವು ಆ ಮನೆಗೆ ಹೋದಾಗ ಹಲ್ಲೆ ಮಾಡಿದರು ಎಂದು ಹೇಳುತ್ತಾರೆ. ಇವರು ಹೇಳುತ್ತಾರೆ, ಪೋಲೀಸ್ ಸ್ಟೇಷನ್‌ಗೆ ಹೋದರೆ, ಕಂಪ್ಲೇಂಟ್‌ನ್ನೇ ರಿಜಿಸ್ಟರ್ಡ್ ಮಾಡಿಲ್ಲವೆಂದು ಹೇಳುತ್ತಾರೆ. ಇಲ್ಲಿ ನಾನು ಡೀಟೈಲ್ಸ್ ಕೊಡುತ್ತೇನೆ. ಕಂಪ್ಲೇಂಟ್ ನಾವು ರಿಜಿಸ್ಟರ್ ಮಾಡಿದ್ದೇವೆ. 4 ಜನರ ಮೇಲೆ ಮೊಕದ್ದಮೆ ಸಂಖ್ಯೆ ಸದರಿ ಠಾಣೆಯಲ್ಲಿ ಪೋಲೀಸ್ ಸಬ್ ಇನ್‌ಸ್ಪೆಕ್ಟರವರು, ಮೊಕದ್ದಮೆ ಸಂಖ್ಯೆ 896 ಕ್ರೈಮ್ 323506 337, ಐ.ಪಿ.ಸಿ. ಆಕ್ಟ್‌ನಲ್ಲಿ ಎಫ್.ಐ.ಆರ್ ಮಾಡುತ್ತಾರೆ, 4 ಜನರ ಮುಂದೆ. ಇವರು ಹೋದರೆ ಸರಿಯಾಗಿ ಮಾತನಾಡಿಲ್ಲ, ಕೇಸೇ ರಿಜಿಸ್ಟರ್ ಮಾಡಿಲ್ಲವೆಂಬ ವಾದ ಏನು ಮಾಡುತ್ತಿದ್ದಾರೆ, ಅದು ಸುಳ್ಳು. 5 ಲಕ್ಷ ರೂಪಾಯಿ ಆಗಲೀ, 60 ಸಾವಿರ ಸ್ಟಾಂಪ್ ಪೇಪರ್ ಆಗಲೀ ಯಾವುದೂ, ಇವನು ಆ ಸ್ಥಳಕ್ಕೇ ಹೋಗಲಿಲ್ಲವೆಂದರೇ, ಈ 5 ಲಕ್ಷ ತೆಗೆದುಕೊಂಡು ಹೋಗಿದ್ದಾರೆಂಬುದು ಸುಳ್ಳು. ಅವನ ಮೇಲೆ ನಾವು ಯಾವ ಕ್ರಮವನ್ನೂ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

(ಗೊಂದಲ)

(4) **ನಿಯಮ 351 ರ ಮೇರೆಗೆ**

(1) ವಿಷಯ :- ಸವಣೂರು ತಾಲ್ಲೂಕು, ಮೋತಿ ತಲಬ ಕೆರೆಗೆ ಹೂಳು ತೆಗೆಯಲು ಹಣ.

ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ) :- ಮಾನ್ಯ ಉಪಾಧ್ಯಕ್ಷರೇ, ಸವಣೂರ್ ತಾಲ್ಲೂಕು ಮೋತಿ ತಲಬ ಕೆರೆಗೆ ಹೂಳು ತೆಗೆಯಲು ಎಷ್ಟು ಲಕ್ಷ